# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗಾಜನೂರು ಅಗ್ರಹಾರ.

**ಶಿವಮೊಗ್ಗ:ತಾ**

**ತರಗತಿ:7** **ವಿಷಯ: ಕನ್ನಡ** **ಮಾರ್ಗದರ್ಶಕರು:ಶ್ರೀ ಸೋಮಲಿಂಗಪ್ಪ ಜೆ**

## ಹುತ್ತರಿ ಹಾಡು-ಪದ್ಯ

**ಹಾಡಿದವರು: ಶಮಂತ.ಎಂ, ಸೃಜನ ಎಸ್, ನಿತೇಶ ಪಿ, ಅಭಯ್ ಆರ್**



ಪದ್ಯ ಭಾಗ

P8W2L2

### ೯. ಹುತ್ತರಿ ಹಾಡು

ಕವಿಶಿಷ್ಯ (ಪಂಜೆ ಮಂಗೇಶರಾವ್) –

**ಪ್ರವೇಶ :** ಕೊಡವರ ಹಾಗೂ ಕೊಡಗಿನ ಜೀವನವನ್ನು ಪ್ರತಿಬಿಂಬಿಸುವ ಹುತ್ತರಿ ಹಾಡು ಒಂದು. ಕೊಡವರು ಸುಗ್ಗಿಯ ಹಬ್ಬದ ಸಂದರ್ಭದಲ್ಲಿ ಹಾಡುವ ಹಾಡು ಇದಾಗಿದೆ. ಇದು ಕೊಡಗಿನ ಪ್ರಾಕೃತಿಕ ಸೌಂದರ್ಯವನ್ನು, ವೀರಶ್ರೀಯನ್ನು ವರ್ಣಿಸುವುದು. ಕೊಡಗಿನ ಸಂಸ್ಕೃತಿ, ಸಂಪ್ರದಾಯದ ಲೇಪನ ಹಾಗೂ ಜನಪದ ಹಿನ್ನೆಲೆಯನ್ನು ಇದು ಒಳಗೊಂಡಿದೆ.



ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ?
ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ?
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ?
ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆಕಳೆ ಕಳೆವಳೋ?

ಅಲ್ಲೆ ಆ ಕಡೆ ನೋಡಲಾ!
ಅಲ್ಲೆ ಕೊಡಗರ ನಾಡಲಾ
ಅಲ್ಲೆ ಕೊಡವರ ಬೀಡಲಾ!



LIVEWORKSHEETS